ಅನ್ನುವುದು ಹೊಳೆಯಿತು. ಮರುಕ್ಷಣ ತನ್ನನ್ನು ಈಗ ಅದೆಲ್ಲ ಅಷ್ಟು ಕಾಡುತ್ತಿಲ್ಲ ಅನ್ನುವುದನ್ನು ಗ್ರಹಿಸಿದ. ಬೆಳಗ್ಗೆ ಚಾಂಬನ್ ಜೇನುತುಪ್ಪ ಹಿಡಿದುಕೊಂಡು ಎಲ್ಲಿಗೋ ಹೋಗಿದ್ದ. ಈತ ಗೋಡೆಯ ಪಕ್ಕ ಸುಮ್ಮನೆ ಕುಳಿತಿದ್ದ. ಚೆಂಗುಟ್ಟಿ ಬುಟ್ಟಿ ಹಿಡಿದು ಇವನೆದುರು ಬಂದಳು. ಇಬ್ಬರೂ ಕಾಡು ಹತ್ತಿದರು. ನೂಲೆಗೆಣಸು, ಹೆಬ್ಬಲಸಿನಕಾಯಿ, ಕಾಡುಮಾವಿನ ಮಿಡಿ ಸಂಗ್ರಹವಾಯಿತು. ಅಲ್ಲಿಯೆ ಇದ್ದ ನಂದಿಮರಕ್ಕೆ ಇವನನ್ನು ಒರಗಿಸಿ ನಿಲ್ಲಿಸಿದವಳು ಹಣಿಗೆಯಿಂದ ಬಾಚತೊಡಗಿದಳು. ಉದ್ದ ಬೆಳೆದ ಕೂದಲು ಜಡಕಾಗಿ ಉರಿಯಿತು. ನಾಕಾರು ಹೇನುಗಳು ಬನಿಯನ್ ಮೇಲೆ ಉದುರಿದವು. ಅಪ್ಪನದು ಅಂದವಳು ಹಳೆಯ ಕೂಪನ್ನು ಬುಟ್ಟಿಯಿಂದ ತೆಗೆದಳು. ಇವನ ಕೂದಲನ್ನು ಗಡ್ಡವನ್ನು ಅವಳದೆ ರೀತಿಯಲ್ಲಿ ಟ್ರಿಮ್ ಮಾಡುವಾಗ ಬೊಡ್ಡಾದ ಕೂಪು ಅಸಾಧ್ಯ ಉರಿಯೇಳಿಸುತ್ತಿದ್ದರೂ ಯಾವ ಜನ್ಮದ ಸಂಬಂಧ ಇದು ಅನ್ನುವ ಭಾವಕ್ಕೆ ಕಣ್ಣು ಮಂಜಾಗುವುದನ್ನು ತಡೆಯಲಾಗಲಿಲ್ಲ. ಕೆಲಸದ ತನ್ಮಯತೆಗೆ ಅಡ್ಡಿಯಾಗುತ್ತಿದ್ದ ಮೇಲುದವನ್ನು ತೆಗೆದು ಕೊಂಬೆಗೆ ಸಿಕ್ಕಿಸಿದಳು. ಈಗೀಗ ಇಬ್ಬರೆ ಇರುವಾಗ ಹಳ್ಳದಲ್ಲಿರಲಿ ಕಾಡಲ್ಲಿರಲಿ ಹೀಗೇ ಬರಿ ಎದೆಯಲ್ಲಿರುತ್ತಿದ್ದಳು. ನೀರ ತಟದಲ್ಲಿ, ಕಾಡ ಮಡಿಲಲ್ಲಿ ಮಿಲನ ನಡೆಯುತ್ತಿತ್ತು. ಪ್ರತಿಸಾರಿ ಹೊಸದೆಂಬಂತೆ ಇವನನ್ನು ಸುಸ್ತಾಗಿಸಿ, ಸ್ಪಂದಿಸಿ ಪುಟಿಯುವ ನಿಸರ್ಗದ ಚೈತನ್ಯವೊಂದು ಅವಳಲ್ಲಿ ಸ್ಥಾಯಿಯಾಗಿತ್ತು.

ಹರಬುರುಕು ಗಡ್ಡ ಉಳಿದಿತ್ತು. ‘ಜಾಣೆ’ ಅಂದ. ಅವಳು ಮಾದಕವಾಗಿ ನಕ್ಕಳು. ಅವಳನ್ನೆಳೆದುಕೊಂಡ. ತಮ್ಮ ಸಂಗತಿ ಮನೆಯವರಿಗೆ ಗೊತ್ತಿದೆಯಾ ಅನ್ನುವ ಸಂದೇಹ ಬರುತ್ತಿತ್ತು ಅವನಿಗೆ. ನಿಸರ್ಗದ ಲಯದಲ್ಲೆ ಉಸಿರಾಡುವ ಇವರಿಗೆ ಇದೂ ಗಾಳಿ ಮಳೆ ಬಿಸಿಲಂತೆ ಸಹಜವಾಗಿದೆಯೇನೊ ಅನಿಸುತ್ತಿತ್ತು. ಎರಡುದಿನ ಹಿಂದೆ ಇದೇ ಕುನ್ನೇರ್ಲು ಗಿಡದಡಿ ನಿತ್ತು ಉಪ್ಪು ಹರಡಿಕೊಂಡ ಮೊರದಲ್ಲಿ ಚಗುಳಿ ಗೂಡಿಂದ ರಾಶಿರಾಶಿ ಚಗುಳಿಗಳನ್ನು ಬೊದಬೊದನೆ ಮೊಟ್ಟೆ ಮರಿ ಸಮೇತ ಕೆಡವಿಕೊಂಡು ಬಿಡಾರದಲ್ಲಿ ರಾತ್ರಿ ಚಟ್ನಿ ಮಾಡಿದ ನೆನಪಲ್ಲಿ ಹಸಿಯಾಗಿ, ‘ನೀನ್ಯಾಕೆ ಗುಡಿಸಲೆದುರು ಬಸಳೆಯೋ ಹರಿವೆಯೊ ಬೆಳೆದುಕೊಳ್ಳಬಾರದು’ ಎಂದು ಕೇಳಿದ. ‘ಅಂತದೆಲ್ಲ ಆಗುವುದಿಲ್ಲ, ಜಾಗವನ್ನ ತಮ್ಮದೆಂದು ವಾದಿಸುವ ದಾಖಲೆಯಾದರೆ ಅನ್ನುವ ಹೆದರಿಕೆಯಾಗಿಬಿಡತದೆ ಫಾರೆಸ್ಟಿನವರಿಗೆ’ ಅಂತ ಹಳೆಯ ಅನುಭವವನ್ನು ಬಿಚ್ಚಿಟ್ಟಳು. ಆದರೂ ಇವನು ಹೇಳಿದ್ದಕ್ಕೆ ಮರುವಾರ ಬುಟ್ಟಿ ಕೊಡಲು ಹೋದವಳು ಹಳ್ಳಿಯಿಂದ ಬಸಳೆಯದೊಂದು ದಂಟನ್ನು ತಂದಳು. ದೂರ ಹಳ್ಳದ ದಂಡೆಯಲ್ಲಿ ವಾಟೆಬಿದಿರು ದಟ್ಟೈಸಿದಲ್ಲಿ ಪೊದೆಯ ಬುಡಕ್ಕೆ ಅದನ್ನೂರಿದ. ‘ಕಾಡಿನ ಬಳ್ಳಿ ಅಂದುಕೋತಾರೆ’ ಅಂತ ನಕ್ಕ. ಹದಿನೈದು ದಿನಕ್ಕೆ ಅದು ಕುಡಿಯೊಡೆದು ಬೆಳೆಯತೊಡಗಿತು. ಅದನ್ನು ನೋಡಿ ಆಚೆಕಡೆ ತೇವವಿರುವಲ್ಲಿ ಪಾರ್ಥೇನಿಯಂ ನಡುವೆ ಅವಳು ದಂಟಿನಸೊಪ್ಪು ಹಾಕಿದಳು. ತನ್ನ ಬಗೆಗೆ ಹೆಮ್ಮೆಪಟ್ಟುಕೊಂಡ. ಮರುಕ್ಷಣ ಸಹಜಜೀವಿಗಳಾದ ಇವರಂತೆ ಬದುಕುವ ನಿಬಂಧನೆಯಲ್ಲಿ ಬಂದ ತಾನು ನಾಗರಿಕ ಪ್ರಪಂಚದ ವಕ್ರಮಾರ್ಗಗಳನ್ನೆಲ್ಲ ಧಾರೆಯೆರೆದು ವಿಷ ಹಾಕುತ್ತಿದ್ದೇನಾ ಅನ್ನುವ ಸಂದೇಹಕ್ಕೊಳಗಾದ.

ಆ ರಾತ್ರಿ ಮತ್ತೊಮ್ಮೆ ರೊಟ್ಟಿಯಂತಹ ಚಂದ್ರ ಕಾಣಿಸಿಕೊಂಡಾಗ ಕಸಿವಿಸಿ ಆಳವಾಯಿತು. ದಿನದಿಂದ ದಿನಕ್ಕೆ ಆಕಾಶ ಆಪ್ತವಾಗಿತ್ತು. ಸಪ್ತರ್ಷಿಮಂಡಲ ಅದರಿಂದ ಬಲಕ್ಕೆ ನಿಶ್ಚಲ ಧ್ರುವತಾರೆ. ಮಧ್ಯರಾತ್ರಿ ಎತ್ತರದಲ್ಲಿ ಗುಂಪಾಗಿ ಸಾಗುವ ವಲಸೆ ಹಕ್ಕಿಗಳು. ನಿಶ್ಚಲ ತಾರೆಗಳ ನಡುವೆ ಥಾಳಾಗಿ ಕಾಣುವಂತೆ ಚಲಿಸುವ ಮಾನವನ ಉಪಗ್ರಹಗಳು. ಬಿಳಿಜಲ್ಲಿ ಸುರುವಿದಂತೆ ಹರಿದ ಆಕಾಶಗಂಗೆ. ಗುರು ಶುಕ್ರ ಮಂಗಳ ಗ್ರಹಗಳು. ರಾತ್ರಿಯ ಬೇಟೆಹಕ್ಕಿಗಳು, ಬೆಳಗಿನಜಾವದ ಹಾಡುಹಕ್ಕಿಗಳು. ಉಚ್ಚೆಹೊಯ್ಯಲು ಎದ್ದುಬಂದ ಚೆಂಗುಟ್ಟಿ ಕಾಣಿಸಿ ಸನ್ನೆ ಮಾಡಿದ. ಹತ್ತಿರ ಬಂದವಳು ಅಂಗತ್ತಾಗಿ ಗೊರಕೆಯಲ್ಲಿದ್ದ ಚಾಂಬನ್ ಕಡೆ ತೋರಿಸಿ ಟಪ್ಪೆಂದು ಎದೆಗೆ ಹೊಡೆದು ಹೋದಳು. ಇದು